ದಿನಾಂಕಃ 30-07-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.
ಮುಖ್ಯ ವಿಚಾರಣೆಃ  ಶ್ರೀ ಎಂ ಎನ್ ಎಸ್  ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಕುರಿತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನು ಹೇಳಿ ಬರೆಸಿ, ಓದಿ ನೋಡಿ ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.

1. ಗುಡೇಅಂಗಡಿ ಗ್ರಾಮದ ಸರ್ವೆ ನಂಬರ 71 ನೇದರ 2002-03ನೇ ಸಾಲಿನ ಪಹಣಿ ಪತ್ರಿಕೆ.
2. ಬಾಡ ಗ್ರಾಮದ ಸರ್ವೆ ನಂಬರ 330 ನೇದರ 2015-16ನೇ ಸಾಲಿನ ಪಹಣಿ ಪತ್ರಿಕೆ.
3. ಬಾಡ ಗ್ರಾಮದ ಸರ್ವೆ ನಂಬರ 358 ನೇದರ ಪಹಣಿ ಪತ್ರಿಕೆ.
4. ಪ್ರತಿವಾದಿಯರಿಗೆ ಕಳುಹಿಸಿದ ನೊಂದಾಯಿತ  ಅಂಚೆ ನೋಟೀಸಿ ಸ್ಥಳ ಪ್ರತಿ

ಮೇಲ್ಕಂಡ ದಾಖಲೆಗಳನ್ನು ನಿಪಿ 1 ರಿಂದ ನಿಪಿ 4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಶ್ರೀ ಎಂ ಎನ್ ಎಸ್  ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಪಿ ಡಬ್ಲು 1 ಇವರ ಮುಂದುವರೆದ ಮುಖ್ಯ ವಿಚಾರಣೆಗೆ ಪ್ರಕರಣವನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆ. ಸಿವಿಲ್ ಜಡ್ಜ್ ಕುಮಟಾ.